ಆ) ರಾಷ್ಟ್ರೀಯ ಹೆದ್ದಾರಿಗಳಾದ ನಂ. 4 ಮತ್ತು 7 ನ್ನು ಕೂಡಿಸುವ ವರ್ತುಲ ರಸ್ತೆಯಾದ 41 ಕಿ.ಮೀ ಬಿಎಂಐಸಿ ಯೋಜನೆಯ ಭಾಗವಾಗಿದ್ದು, ಸದರಿ ಕಾಮಗಾರಿಗಳನ್ನು ನಂದಿ ಇನ್‌ಪ್ರಾಸ್ಟ್ರಕ್ಚರ್ ಎಂಟರ್‌ಪ್ರೈಸಸ್ ಲಿಮಿಟೆಡ್ ಸಂಸ್ಥೆ (ನೈಸಿಲ್)ಗೆ ನೀಡಲಾಗಿದೆ. ಸದರಿ ಕಾಮಗಾರಿಯು ಸಧ್ಯದಲ್ಲೇ ಪ್ರಾರಂಭಗೊಳ್ಳಲಿದೆ.

ಇ) ಕಂಪನಿಯು ನೀಡಬೇಕಾಗಿರುವ ಪರಿಹಾರ ಮೊತ್ತವನ್ನು ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಬೆಲೆ ನಿಗಧಿ ಸಮಿತಿಯು ನಿಗಧಿಪಡಿಸುವುದು.

ಈ) ಸರ್ಕಾರಿ ಜಮೀನಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದ ಬಡ ರೈತರಿಗೆ ಸರ್ಕಾರದಿಂದ ನೀಡುವ ಪರಿಹಾರ ಮೊತ್ತವನ್ನು ಕಂಪನಿಯು ಪ್ರತ್ಯೇಕವಾಗಿ ಪರಿಶೀಲಿಸಿ ನಿಗಧಿಪಡಿಸಿ ನೀಡುವುದು.

ಭೂಮಾಪನ ಕಾರ್ಯ

4837 - ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ರಾಜ್ಯದಲ್ಲಿನ ಭೂಮಿಯ ಭೂಮಾಪನ ಕಾರ್ಯ ಎಷ್ಟು ವರ್ಷಗಳ ಹಿಂದೆ ಆಗಿದೆ?*
2. *ಈಗ ಎಲ್ಲ ಭೂಮಿಯ ಮಾಪನ ಮಾಡುವ ಅಗತ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*
3. *ಹಾಗಿದ್ದಲ್ಲಿ ಈ ಕಾರ್ಯವನ್ನು ಸರ್ಕಾರ ಎಂದಿನಿಂದ ಕೈಗೆತ್ತಿಕೊಳ್ಳುವುದು?*

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಈ ಕಾರ್ಯ 110 ವರ್ಷಗಳ ಹಿಂದೆ ಆಗಿದೆ.

ಆ) ಹೌದು.

ಇ) ಈ ಕಾರ್ಯಕ್ಕೆ ಹೆಚ್ಚಿನ ಹಣಕಾಸಿನ ಅವಶ್ಯಕತೆ ಇರುವುದರಿಂದ ಈ ಬಗ್ಗೆ ಪರಿಶೀಲಿಸಲಾಗುವುದು.

ರಾಜ್ಯದಲ್ಲಿರುವ ಕೈಗಾರಿಕಾ ಸಹಕಾರ ಸಂಘಗಳು

4838 - ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಇರುವ ಕೈಗಾರಿಕಾ ಸಹಕಾರ ಸಂಘಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು)*